ಕಾರು-ಫೋನ್ ವ್ಯವಸ್ಥೆಯನ್ನು ಹೊಂದಿರುವ ರೈತರುಗಳ ಪಂಪ್‌ಸೆಟ್‌ಗಳಿಗೆ ವಿಧಿಸುತ್ತಿರುವ ವಿದ್ಯುತ್ ದರ

2352(1844) ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಾರು, ಫೋನ್ ಸೌಲಭ್ಯಗಳನ್ನು ಹೊಂದಿರುವ ರೈತರುಗಳ ಪಂಪ್‌ಸೆಟ್ಟುಗಳಿಗೆ ಒಂದು ದರ ಹಾಗೂ ಇತರ ರೈತರುಗಳಿಗೆ ಒಂದು ದರವನ್ನು ವಿಧಿಸುವ ಪದ್ಧತಿಯು ಜಾರಿಯಲ್ಲಿದೆಯೇ; ಇದ್ದರೆ ಅದಕ್ಕೆ ಕಾರಣಗಳೇನು;

ಆ) ಫೋನ್ ಮುಂತಾದ ಸಂಪರ್ಕ ಸಾಧನೆಗಳು ಇಂದು ಅತ್ಯಾವಶ್ಯಕವಾಗಿರುವ ಹಿನ್ನೆಲೆಯಲ್ಲಿ ಇಂಥ ಪ್ರತ್ಯೇಕ ವಿದ್ಯುತ್ ದರ ವಿಧಿಸುವುದನ್ನು ಸರ್ಕಾರ ಪುನರ್ ಪರಿಶೀಲನೆ ಮಾಡುವುದೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :—

ಅ) ಹೌದು. ನೀರಾವರಿ ಪಂಪುಸೆಟ್ಟು ಗ್ರಾಹಕರುಗಳು ಹೊಂದಿರುವ ಸೌಲಭ್ಯದ ಆಧಾರದ ಮೇಲೆ ಅವರು ಹೊಂದಿರುವ ನೀರಾವರಿ ಪಂಪುಸೆಟ್ಟುಗಳನ್ನು ವರ್ಗೀಕರಣ ಮಾಡಲಾಗಿದೆ.

ಆ) ಭೂಸಂಪರ್ಕ ದೂರವಾಣಿ ಹೊಂದಿರುವ ನೀರಾವರಿ ಪಂಪುಸೆಟ್ಟುದಾರರನ್ನು ಕಡಿಮೆ ದರದ ಜಕಾತಿ (ಎಲ್.ಟಿ-4(ಎ) ಯಡಿಯಲ್ಲಿಯೇ ಒಂದು ವರ್ಷದವರೆಗೆ ಮುಂದುವರೆಸಿದ್ದು, ವ್ಯತ್ಯಾಸದ ಹಣವನ್ನು ಸರ್ಕಾರವು ಭರಿಸುತ್ತದೆ.

ಎಲ್ಲಾ ಅಂಶಗಳನ್ನು ಸಮಗ್ರ ರೀತಿಯಲ್ಲಿ ಪರಿಶೀಲಿಸಿದ ನಂತರವೇ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ 7 ವಿದ್ಯುತ್ ದರಗಳ ಪರಿಷ್ಕರಣೆ ಬಗ್ಗೆ ತನ್ನ ಆದೇಶವನ್ನು ನೀಡಿರುತ್ತದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶಗಳನ್ನು ಪಾಲಿಸುತ್ತಿದೆ.

ರಾಜ್ಯದಲ್ಲಿನ ಕೃಷಿ ನೀರಿನ ಉಪಯೋಗ ಮಾಡಿಕೊಳ್ಳಲು ರಚಿತವಾದ ಸಹಕಾರ ಸಂಘಗಳು.

2353(1846) ಶ್ರೀ ಜಯಪ್ರಕಾಶ್ ಹೆಗಡೆ ಕೆ. (ಬ್ರಹ್ಮಾವರ) :— ಮಾನ್ಯ ಜಲಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕೃಷಿಗಾಗಿ ನೀರನ್ನು ಉಪಯೋಗ ಮಾಡಿಕೊಳ್ಳುವಲ್ಲಿ ರಚಿತವಾದ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ಆ) ಅಂಥ ಸಂಘಗಳು ಯಾವ ಯಾವ ಜಿಲ್ಲೆಗಳಲ್ಲಿ ಕೆಲಸ ಪ್ರಾರಂಭಿಸಿವೆ? ಅವುಗಳಿಗೆ ಹೂಳು ಎತ್ತುವ ಕೆಲಸ ಕಾರ್ಯಗಳಿಗಾಗಿ ಹಣವನ್ನು ಕೊಡಲಾಗಿದೆಯೇ?